# ನವಿಲುಗನ್ನಡಿ

ಅಂದವಾದ ಮುಖಪುಟ, ಅರ್ಥಪೂರ್ಣ ಬರಹಗಳಿರುವ ಜೂನ್ ತಿಂಗಳ 'ಮಯೂರ' ಇಷ್ಟವಾಯಿತು. ಇದು ಸಂದರ್ಶನ, ಕತೆ, ಪ್ರಬಂಧ, ಪತ್ತೆದಾರಿ ಕತೆ, ನೀಳ್ಗತೆಗಳಿರುವ ಪರಿಪೂರ್ಣ ಮಾಸಿಕ.

**ಅನುಪಮಾ ವಸ್ತ್ರದ, ಇಳಕಲ್**

'ಮಾತು–ಕತೆ'ಯಲ್ಲಿ ಕತೆಗಾರ ವಿವೇಕ ಶಾನಭಾಗ ಅವರ ಮಾತುಗಳು ಸ್ಫೂರ್ತಿದಾಯಕ. 'ನನ್ನ ಕಥಾಪ್ರಸಂಗ'ದಲ್ಲಿ ಅಬ್ದುಲ್ ರಶೀದ್ ಅವರ ಅನುಭವದ ನುಡಿಗಳು ಅರ್ಥಪೂರ್ಣ.

**ಎಂ.ಎನ್. ರಾಜಶೇಖರ್, ಬೆಂಗಳೂರು**

ರಹಮತ್ ತರೀಕೆರೆ ಅವರ 'ಸೈಕಲ್ ಸವಾರಿಯ ಸ್ಮೃತಿಗಳು' ಪ್ರಬಂಧ ಹಲವು ನೆನಪುಗಳನ್ನು ತಂದಿತು. ಶೈಲಜಾ ಸುರೇಶ್ ಅವರ 'ತಾಯಮ್ಮ', 'ಗೌತಮ' ಅವರ 'ಆಮೇಲೆ' ಕತೆಗಳು ಹೃದಯಸ್ಪರ್ಶಿ.

**ಗುರುಮೂರ್ತಿ ಪೆಂಡಕೂರು**
**ಕೊಹಿಮ ಬಸರಕೋಡು**

'ಸೈಕಲ್ ಸವಾರಿಯ ಸ್ಮೃತಿಗಳು' ಪ್ರಬಂಧ ಸರಳ ಭಾಷೆ, ಸುಲಲಿತ ನಿರೂಪಣೆ, ತೆಳು ಹಾಸ್ಯ ಶೈಲಿಯಿಂದ ಓದಿದ ನಂತರವೂ ಮನದಲ್ಲಿ ಇಳಿದು ಉಳಿದಿದೆ.

**ಇಂದಿರಾ ಎಸ್.ಕೆ., ಬೆಂಗಳೂರು**

ವಿಭಿನ್ನ ಕಥಾವಸ್ತುಗಳನ್ನು ಹೊಂದಿರುವ ಬಸವರಾಜ ಸಾದರ ಅವರ ಅತಿ ಸಣ್ಣಕತೆಗಳು ಮನಸೆಳೆದವು.

**ಸುಂದರ್, ಬೆಂಗಳೂರು**

ನಾಡಿನುದ್ದಕ್ಕೂ ಕನ್ನಡ ನಾಟಕಗಳನ್ನು ಪ್ರದರ್ಶಿಸಿ, ಪಾಶ್ಚಾತ್ಯ ನಾಟಕಗಳನ್ನು




ಕನ್ನಡಕ್ಕೆ ತಂದ ನಾಟಕಕಾರ ಪರ್ವತವಾಣಿ ಅವರ ಕುರಿತು ('ರಂಗವಿಹಂಗಮ') ಓದಿ ಸಂತಸವಾಯಿತು.

**ಪಿ. ಜಯವಂತ ಪೈ, ಕುಂದಾಪುರ**

'ಹುಲ್ಲಾಗು ಬೆಟ್ಟದಡಿ' (ಛಾಯಾ ಭಟ್) ಕತೆ ವಿಶಿಷ್ಟ ವಸ್ತುವಿನಿಂದ ಓದುಗರ ಮನಸ್ಸಿನಲ್ಲಿ ನಿಲ್ಲುತ್ತದೆ. ಉತ್ತಮ ಶೈಲಿ, ಭಾಷೆಯ 'ಪದ, ಕಾಗುಣಿತ, ವ್ಯಾಕರಣ... ಇತ್ಯಾದಿ' (ನಾಗರಾಜ ವಸ್ತಾರೆ) ಕತೆ ಸೊಗಸಾಗಿದೆ.

**ಅರವಿಂದ ಬಿರಾದಾರ, ವಿಜಾಪುರ**

ಸ್ಟೀಫನ್ ಲೀಕಾಕ್ ಅವರ 'ಈ ಬ್ಯಾಂಕುಗಳ ಸಹವಾಸವೇ ಬೇಡ' (ಕನ್ನಡಕ್ಕೆ: ಸಚೇತನ್ ಭಟ್) ಉತ್ತಮ ಕತೆ.

**ಕೀರ್ತಿ ದೇಸಾಯಿ, ಬೆಳಗಾವಿ**

'ವ್ಯಂಗ್ಯಭಾವಗಳ ಕಲೆಗಾರ ರಾವ್‌ಬೈಲ್' (ಶರದ ಸೌಕೂರ) ಕಲಾವಿದ ರಾವ್‌ಬೈಲ್ ಅವರ ಕಲೆ, ವ್ಯಕ್ತಿತ್ವನ್ನು ಸರಿಯಾಗಿ ದಾಖಲಿಸಿದೆ. ಹಾಗೆಯೇ 'ಪ್ರಭು ಮಂದಹಾಸ' (ಮಲೆಯೂರು ಗುರುಸ್ವಾಮಿ) ಲೇಖಕ ಪ್ರಭುಶಂಕರ ಅವರನ್ನು ಆಪ್ತವಾಗಿ ಚಿತ್ರಿಸಿದ ಲೇಖನ.

**ಸಂಜೋತಾ, ಬೆಂಗಳೂರು**